# ಪದ್ಯ ಭಾಗ–೧ ಹೊಸಹಾಡು

**<u>ಕೃತಿಕಾರರ ಪರಿಚಯ:</u> ಕಯ್ಯಾರ ಕಿಞ್ಞಣ್ಣ ರೈ**

ಕಯ್ಯಾರ ಕಿಞ್ಞಣ್ಣ ರೈ ಅವರು (ಕ್ರಿಸ್ತ ಶಕ ೧೯೧೫) ಕಾಸರಗೋಡು ಜಿಲ್ಲೆಯ ಕಯ್ಯಾರ ಗ್ರಾಮದವರು.

ಇವರ ಪ್ರಮುಖ ಕೃತಿಗಳೆಂದರೆ; **ಶ್ರೀಮುಖ, ಐಕ್ಯಗಾನ, ಪುನರ್ನವ ಚೇತನ ಮತ್ತು ಕೊರಗ, ಗಂಧವತಿ** ಮುಂತಾದ ಕವನ ಸಂಕಲನಗಳು; **ವಿರಾಗಿಣಿ** ಎಂಬ ನಾಟಕ; **ಅನ್ನದೇವರು ಮತ್ತು ಇತರ ಕತೆಗಳು** ಎಂಬ ಸಣ್ಣಕಥಾ ಸಂಕಲನ; **ರತ್ನಾಕರ, ಪರಶುರಾಮ, ಎ. ಬಿ. ಶೆಟ್ಟಿ** ಎಂಬ ಜೀವನ ಚರಿತ್ರೆಗಳು; **ದುಡಿತವೇ ನನ್ನ ದೇವರು** ಎಂಬ ಆತ್ಮಕಥೆ, **ಗೋವಿಂದ ಪೈ** – ಸ್ಮೃತಿ ಕೃತಿ, **ಸಾಹಿತ್ಯ ದೃಷ್ಟಿ** – ವಿಮರ್ಶಾ ಕೃತಿ, **ಪಂಚಮಿ** – ಅನುವಾದ ಕೃತಿ ಮುಂತಾದವು.

ಇವರಿಗೆ ೧೯೬೯ರಲ್ಲಿ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**, ೨೦೦೫ರಲ್ಲಿ **ಆಳ್ವಾಸ್ ನುಡಿಸಿರಿ ಪ್ರಶಸ್ತಿ**, ೨೦೦೬ರಲ್ಲಿ **ನಾಡೋಜ ಪ್ರಶಸ್ತಿ** ಮುಂತಾದ ಪ್ರಶಸ್ತಿ ಗೌರವಗಳು ಲಭಿಸಿವೆ. ಇವರು ಮಂಗಳೂರಿನಲ್ಲಿ ನಡೆದ ಅರವತ್ತಾರನೆಯ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಪದ್ಯವನ್ನು ಕಯ್ಯಾರ ಕಿಞ್ಞಣ್ಣ ರೈ ಅವರು ಸಂಪಾದಿಸಿರುವ **ಶತಮಾನದ ಗಾನ** ಕವನಸಂಕಲನ ದಿಂದ ಆರಿಸಿಕೊಳ್ಳಲಾಗಿದೆ.

**ಅ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ.**

**೧) ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?**

**ಉತ್ತರ:** ಕವಿ ನವಭಾವ–ನವಜೀವ–ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು ಎಂದಿದ್ದಾರೆ.

**೨) ವೀರಧ್ವನಿ ಹೇಗೆ ಏರಬೇಕು?**

**ಉತ್ತರ:** ಬಹಳ ಗಂಭೀರವಾದ ಭಾವನೆಯ ಅಲೆಗಳನ್ನು ಹರಡಿ ವೀರಧ್ವನಿ ಏರಬೇಕು.

**೩) ಕಡಿದೊಗೆಯಬೇಕಾದ ಪಾಶಗಳು ಯಾವುವು?**

**ಉತ್ತರ:** ಜಾತಿ–ಕುಲ–ಮತ–ಧರ್ಮ ಎಂಬ ಪಾಶಗಳನ್ನು ಕಡಿದೊಗೆಯಬೇಕು.

**೪) ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?**

**ಉತ್ತರ:** ಹಾಡು ನುಡಿಗುಂಡುಗಳು ಭಯದ ಬೆನ್ನಟ್ಟಬೇಕು.

**೫) ಬಾನು ಬುವಿ ಯಾವುದರಿಂದ ಬೆಳಗಬೇಕು?**

**ಉತ್ತರ:** ಜಡನಿದ್ರೆಯಿಂದ ಎಚ್ಚರಗೊಂಡು ವೀರ ಅಟ್ಟಹಾಸದಲ್ಲಿ ಬಾನು–ಬುವಿ ಬೆಳಗಬೇಕು.

**ಆ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

**೧) ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?**

**ಉತ್ತರ:** ಹೊಸ ಭಾವನೆಯನ್ನು ಮೂಡಿಸುವ, ಹೊಸ ಚೈತನ್ಯ, ಹೊಸ ಶಕ್ತಿಯನ್ನು ತುಂಬಿಸುವ ಹಾಡನ್ನು ಹಾಡಬೇಕು. ಅಂತಹ ಹಾಡನ್ನು ಹಾಡಿದಾಗ ಬಹಳ ಗಂಭೀರವಾದ ಭಾವನೆಯ ತರಂಗಗಳು ಹರಡಿ ವೀರಧ್ವನಿಯೇರಬೇಕು ಎಂದು ಕವಿ ಬಯಸುತ್ತಾರೆ.

**೨) ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?**

**ಉತ್ತರ:** ಜಾತಿ–ಕುಲ–ಮತ–ಧರ್ಮ ಎಂಬ ಪಾಶಗಳನ್ನು ಕಡಿದೊಗೆದು ಉತ್ಸಾಹದಿಂದ ಎದೆಹಿಗ್ಗಿ ಹಾಡಬೇಕು. ಆ ಹಾಡು ಯುಗಯುಗಗಳಾಚೆಗೂ ಜಗತ್ತಿನ ಮೂಲೆ ಮೂಲೆಗೂ ತಲುಪುವಂತ ಹಾಡು ಗುಡುಗಬೇಕು ಎಂದು ಕವಿ ಆಶಿಸುತ್ತಾರೆ.

**೩) ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು?**

**ಉತ್ತರ:** ಈ ಹೊಸ ಹಾಡು ಇದೇ ಮೊದಲ ಹಾಡಾಗಿದ್ದು ಇದಕ್ಕೂ ಮೊದಲು ಇಂತಹ ಹಾಡು ಇರಲಿಲ್ಲ. ಅಂದಿನ ಕಷ್ಟಗಳು ಅಂದಂದೇ ಮುಗಿದಿವೆ. ಇಂದು ಅವುಗಳ ಗೊಡವೆ ಇಲ್ಲ. ಆದ್ದರಿಂದ ಈ ಹಾಡು ಹೊಸತು ಹಾಡು ಎಂದು ಕವಿ ಹೇಳಿದ್ದಾರೆ.

**ಇ] ಕೊಟ್ಟಿರುವ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧) ಹೊಸಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ನಮ್ಮನ್ನು ಬಿಗಿದಿರುವ ಜಾತಿ–ಕುಲ–ಮತ–ಧರ್ಮ ಎಂಬ ಪಾಶಗಳನ್ನು ಕತ್ತರಿಸಿ ಉತ್ಸಾಹದಿಂದ ಹಾಡಬೇಕು. ಆ ಸಮಾನತಾ ಭಾವವು ಯುಗಯುಗಗಳಲ್ಲಿ ಜಗತ್ತಿನ ಮೂಲೆ ಮೂಲೆಯನ್ನು ತಲುಪಬೇಕು. ಆ ಹೊಸ ಹಾಡನ್ನು ಉನ್ನತ ಶಿಖರದ ತುದಿಯಲ್ಲಿ ನಿಂತು ಹಾಡಿದಾಗ ಅದರ ನುಡಿಗುಂಡುಗಳು ದಶದಿಕ್ಕಿಗೂ ಸಿಡಿದು ಜನರಲ್ಲಿ ತುಂಬಿರುವ ಭಯವನ್ನು ಓಡಿಸಬೇಕು.

ಗಂಡೆದೆಯ ಗರ್ಜನೆಗೆ ನಮ್ಮ ದೇಶದ ಕೋಟ್ಯಂತರ ಜನರು ದನಿಗೂಡಿಸಬೇಕು. ಆ ಒಕ್ಕೊರಲಿನ ಏಕತಾಭಾವದ ಪ್ರತಿಧ್ವನಿಯು ಭೂಮಿ–ಆಕಾಶವನ್ನು ಆವರಿಸಬೇಕು. ಜಡತ್ವದಿಂದ ಕೂಡಿರುವ ಜನರು ಎಚ್ಚೆತ್ತು ಅಂಧಕಾರದ ಕತ್ತಲೆಯಿಂದ ಆವರಿಸಲ್ಪಟ್ಟಿರುವ ಬಾನು–ಭೂಮಿಯನ್ನು ಬೆಳಗಬೇಕು. ಪ್ರತಿಯೊಬ್ಬರ ನಡೆ–ನುಡಿಯಲ್ಲಿ ಕ್ರಾಂತಿಯ ಕಿಡಿ ಕೆರಳಬೇಕು.

ಜಯವನ್ನು ಹೊಂದಿದ ಮಾತೆಯೇ ನೀನು ಹೆದರದೆ ಧೈರ್ಯದಿಂದ ತಲೆ ಎತ್ತಿ ನೋಡು. ಹಿಂದಿನ ಪಾಡು ಹಿಂದೆಯೇ ಮುಗಿಯಿತು. ಇದೇ ಮೊದಲು. ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ. ಆದ್ದರಿಂದ ಇಂದು ಇದೇ ಹೊಸಹಾಡು. ಎಂದು ಹೇಳುತ್ತಾ ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯ ನೂತನವಾಗಿರಬೇಕೆಂಬುದು ಪದ್ಯದ ಆಶಯವಾಗಿದೆ.

**ಈ] ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**೧) "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"**

**ಉತ್ತರ: ಆಯ್ಕೆ:** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರ **ಶತಮಾನದ ಗಾನ** ಕವನಸಂಕಲನ ದಿಂದ ಆರಿಸಲಾಗಿರುವ **'ಹೊಸಹಾಡು'** ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಬದುಕಿಗೆ ಹೊಸ ತಿರುವನ್ನು ನೀಡಬಲ್ಲ, ಹೊಸ ಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ ಹಾಡನ್ನು ಹಾಡಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಹೊಸಹಾಡು ಹಾಡಿದಾಗ ಬಹಳ ಗಂಭೀರವಾದ ಭಾವನೆಯು ಎಲ್ಲೆಡೆ ಹರಡಿ ವೀರಧ್ವನಿ ಏರಬೇಕು ಎಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ:** ಹೊಸ ಹಾಡನ್ನು ಕೇಳಿದವರಲ್ಲಿ ವೀರತ್ವ ಮೂಡಬೇಕು ಎಂಬುದನ್ನು **ವೀರಧ್ವನಿ ಏರಬೇಕು** ಎಂದು ಕವಿ ಹೇಳಿರುವುದು ಸ್ವಾರಸ್ಯವಾಗಿದೆ.

**೨) "ಯುಗಯುಗಗಳಾಚೆಯಲಿ ಲೋಕಲೋಕಾಂತರದಲಿ ಆ ಹಾಡು ಗುಡುಗಬೇಕು"**

**ಉತ್ತರ: ಆಯ್ಕೆ:** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರ **ಶತಮಾನದ ಗಾನ** ಕವನಸಂಕಲನ ದಿಂದ ಆರಿಸಲಾಗಿರುವ **'ಹೊಸಹಾಡು'** ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ನಮ್ಮನ್ನು ಬಿಗಿದಿರುವ ಜಾತಿ-ಕುಲ-ಮತ-ಧರ್ಮ ಎಂಬ ಪಾಶಗಳನ್ನು ಕತ್ತರಿಸಿ ಉತ್ಸಾಹದಿಂದ ಹಾಡಬೇಕು. ಎಂದು ಹೇಳುವ ಸಂದರ್ಭದಲ್ಲಿ ಕವಿ ಆ ಸಮಾನತಾ ಭಾವವು 'ಯುಗಯುಗಗಳಲ್ಲಿ ಜಗತ್ತಿನ ಮೂಲೆ ಮೂಲೆಯನ್ನು ತಲುಪಬೇಕು' ಎಂದು ಹೇಳಿದ್ದಾರೆ.

**ಸ್ವಾರಸ್ಯ:** ಜಾತಿ-ಕುಲ-ಮತ-ಧರ್ಮ ಎಂಬ ಕಟ್ಟಳೆಗಳನ್ನು ಮೀರಿ ನಮ್ಮಲ್ಲಿ ಮನುಜ ಮತದ ಭಾವನೆ ಮೂಡಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**೩) "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು" ಮತ್ತು**

**೪) "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"**

**ಉತ್ತರ: ಆಯ್ಕೆ:** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರ **ಶತಮಾನದ ಗಾನ** ಕವನಸಂಕಲನ ದಿಂದ ಆರಿಸಲಾಗಿರುವ **'ಹೊಸಹಾಡು'** ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ನಮ್ಮ ನಡೆ-ನುಡಿಗಳಲ್ಲಿ ಕ್ರಾಂತಿ(ಬದಲಾವಣೆ)ಯನ್ನು ಉಂಟುಮಾಡಬೇಕಾಗಿರುವುದರ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ನಾವು ಜಡನಿದ್ರೆಯಿಂದ ಎಚ್ಚೆತ್ತುಕೊಂಡು ವೀರ ಅಟ್ಟಹಾಸದಿಂದ ಬಾನು ಮತ್ತು ಭೂಮಿಯನ್ನು ಬೆಳಗಬೇಕು ಹಾಗೂ ನಮ್ಮ ಪ್ರತಿ ಹೆಜ್ಜೆಯಲ್ಲೂ ಕ್ರಾಂತಿಯನ್ನುಂಟುಮಾಡಬೇಕು ಎಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ:** ಒಳ್ಳೆಯ ಬದಲಾವಣೆಯನ್ನು ಉಂಟುಮಾಡಬೇಕಾದತ ಮೊದಲು ಮೌಢ್ಯಾಂಧಕಾರಗಳಿಂದ ಜಡವಾಗಿರುವ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**೫) "ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು"**

**ಉತ್ತರ: ಆಯ್ಕೆ:** ಈ ವಾಕ್ಯವನ್ನು **ಕಯ್ಯಾರ ಕಿಞ್ಞಣ್ಣ ರೈ** ಅವರ **ಶತಮಾನದ ಗಾನ** ಕವನಸಂಕಲನ ದಿಂದ ಆರಿಸಲಾಗಿರುವ **'ಹೊಸಹಾಡು'** ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.

**ಸಂದರ್ಭ:** ಕವಿಯು ಹೊಸಹಾಡಿನ ಬಗ್ಗೆ ಹೇಳುತ್ತಾ ಜಯಜನನಿಯಾದ ಭಾರತಾಂಬೆಯನ್ನು ಕುರಿತು "ಶಿರವೆತ್ತಿ ವೀರಭರವಸೆಯಿಂ ಹೊಸಹಾಡನ್ನು ಕೇಳು" ಎಂದು ಹೇಳುವ ಸಂದರ್ಭದಲ್ಲಿ ಹಿಂದಿನ ಪಾಡು ಹಿಂದೆಯೇ ಮುಗಿಯಿತು. ಇದೇ ಮೊದಲು. ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ. ಆದ್ದರಿಂದ ಇಂದು ಇದೇ ಹೊಸಹಾಡು. ಎಂದು ಹೇಳಿದ್ದಾರೆ.

**ಸ್ವಾರಸ್ಯ:** ಹಿಂದೆ ಆಗಿರುವ ಹಳೆಯದನ್ನು ನೆನೆಯುತ್ತಾ ಇಂದಿನ ಅವಕಾಶದಿಂದ ವಂಚಿತರಾಗಬಾರದು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

**ಉ] ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧) ಧ್ವನಿ : ದನಿ :: ಯುಗ : **ಜುಗ**

೨) ಲೋಕಾಂತರ : ಸವರ್ಣದೀರ್ಘ ಸಂಧಿ :: ಉನ್ನತೋನ್ನತ : **ಗುಣಸಂಧಿ**

೩) ಬಾನು : ಆಕಾಶ :: ಭಾನು : **ಸೂರ್ಯ**

**ಊ] ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧) 'ಹೊಸಹಾಡು' ಪದ್ಯದ ಆಕರ ಗ್ರಂಥ________ **(ಶತಮಾನದಗಾನ)**

೨) 'ಹೊಸಹಾಡು' ಪದ್ಯದ ಕವಿ________ **(ಗೋಪಾಲಕೃಷ್ಣ ಅಡಿಗ)**

೩) ಉನ್ನತೋನ್ನತ________ಶಿಖರವನೇರಿ ಹಾಡಲ್ಲಿ ಹಾಡಬೇಕು. **(ಘನಹಿಮಾದ್ರಿ)**

೪) ________ಧರ್ಮಪಾಶಗಳ ಕಡಿದೊಗೆದು ಎದೆಹಿಗ್ಗಿ ಹಾಡಬೇಕು. **(ಜಾತಿ-ಕುಲ-ಮತ)**

****** ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ *******